ದಿನಾಂಕ ಃ 05-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ವಿಚಾರಣೆಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಎ.ಎಮ್.ಪಿ ವಕೀಲರಿಂದಃ**

ಮೃತ ಬಾಳವ್ವ ನನ್ನ ಅಜ್ಜನ ಹೆಂಡತಿ ಇರುತ್ತಾರೆ ಎಂದರೆ ಸರಿ . ಮೃತ ಪರಶುರಾಮ, ಮೃತ ಅರ್ಜುನ ಮತ್ತು ಮೃತ ಶಂಕರ ಇವರು ಅಣ್ಣ ತಮ್ಮಂದಿರು ಎಂದರೆ ಸರಿ . ಪ್ರತಿವಾದಿ ಸಂಖ್ಯೆ 1 ರಿಂದ 7 ಮೃತ ಪರಶುರಾಮ ಇವರ ಮಕ್ಕಳು ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ಸಂಖ್ಯೆ 8 ರಿಂದ 18 ಮೃತ ಅರ್ಜುನ ಇವರ ಮಕ್ಕಳು ಮತ್ತು ಮೊಮ್ಮಕ್ಕಳು ಇರುತ್ತಾರೆ ಎಂದರೆ ಸರಿ . ಪ್ರತಿವಾದಿ ಸಂಖ್ಯೆ 19 ಇವರು ಮೃತ ಪರಶುರಾಮ , ಮೃತ ಅರ್ಜುನ ಮತ್ತು ಮೃತ ಶಂಕರ ಇವರ ಸಹೋದರಿ ಇರುತ್ತಾರೆ ಎಂದರೆ ಸರಿ . ದಾವಾ ಆಸ್ತಿಗಳ ಕುರಿತು ಕೇವಲ ಪಹಣಿ ಪತ್ರಿಕೆಗಳನ್ನು ಮಾತ್ರ ಹಾಜರುಪಡಿಸಿದ್ದು ಸದರಿ ಪಹಣಿ ಪತ್ರಿಕೆಗಳು ಯಾವ ಆಧಾರದ ಮೇಲೆ ದಾಖಲಾಗಿರುತ್ತದೆ ಎಂಬುದರ ಕುರಿತು ನೀವು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದು ಕೇಳಲಾಗಿ ಸಾಕ್ಷಿಯು ದಾಖಲೆಗಳನ್ನು ಹಾಜರು ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನಮ್ಮ ಏಕತ್ರ ಕುಟುಂಬದ ಆಸ್ತಿಗಳು ಇರುತ್ತವೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅಜ್ಜ ಯಲ್ಲಪ್ಪ ನಾಗಪ್ಪ ಕೊರವೆಕರ ಇವರ ಹೆಸರಿಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ಕೇಳಲಾಗಿ ಸಾಕ್ಷಿಯು ನಮ್ಮ ಅಜ್ಜ ಬಹಳ ವರ್ಷಗಳ ಹಿಂದೆಯೇ ತೀರಿಕೊಂಡಿದ್ದರಿಂದ ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ದಾಖಲಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ದೊಡ್ಡಪ್ಪನಾದ ಪರಶುರಾಮ ಯಲ್ಲಪ್ಪ ಕೊರವೆಕರ ಇವರ ಹೆಸರಿಗೆ ಬೆಳವಟಗಿ ಗ್ರಾಮದ ಬ್ಲಾಕ್ ನಂ. 227 ರಲ್ಲಿ 2 ಎಕರೆ 19 ಗುಂಟ , ಬ್ಲಾಕ್ ನಂ. 243 ರಲ್ಲಿ 2 ಎಕರೆ 26 ಗುಂಟ , ಮುರ್ಕವಾಡ ಗ್ರಾಮದ ಬ್ಲಾಕ್ ನಂ. 166 ರಲ್ಲಿ 2 ಎಕರೆ 1 ಗುಂಟ, ಬ್ಲಾಕ್ ನಂ. 163 ರಲ್ಲಿ 1 ಎಕರೆ 11 ಗುಂಟ, ಬ್ಲಾಕ್ ನಂ. 13 ರಲ್ಲಿ 2 ಎಕರೆ 3 ಗುಂಟ, ಬ್ಲಾಕ್ ನಂ. 268 ರಲ್ಲಿ 1 ಎಕರೆ 2 ಗುಂಟ, ಬ್ಲಾಕ್ ನಂ. 270 ರಲ್ಲಿ 38 ಗುಂಟ, ಡೊಂಗರಿ ಕೊಪ್ಪ ಗ್ರಾಮದ ಬ್ಲಾಕ್ ನಂ. 32 ರಲ್ಲಿ 23 ಎಕರೆ 30 ಗುಂಟ ಮತ್ತು ಬ್ಲಾಕ್ ನಂ. 31 ರಲ್ಲಿ 2 ಎಕರೆ 31 ಗುಂಟ, ಜಮೀನುಗಳು ಬಂದಿರುತ್ತವೆ. ಈ ಮೇಲೆ ಹೇಳಿದ ಆಸ್ತಿಗಳು ನಮ್ಮ ದೊಡ್ಡಪ್ಪನಿಗೆ ಅಜ್ಜನಿಂದ ಬಂದಿರುತ್ತವೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ದೊಡ್ಡಪ್ಪನ ಹೆಸರಿನಲ್ಲಿ ಮೇಲೆ ಹೆಳಿದ ಆಸ್ತಿಗಳು ಎಷ್ಟನೇ ಇಸವಿಯಲ್ಲಿ ಹಕ್ಕು ಬದಲಾವಣೆ ಆಗಿರುತ್ತವೆ ಎಂದು ಹೇಳಲು ಬರುವುದಿಲ್ಲ . ದಾವಾ ಆಸ್ತಿ ಸ್ವತ್ತು ಸಂಖ್ಯೆ 5 ರಿಂದ 9 ಮಾತ್ರ ನಮ್ಮ ಅಜ್ಜನಿಂದ ಬಂದ ಆಸ್ತಿಗಳು ಇದ್ದು ಅವುಗಳಲ್ಲಿ ಈಗಾಗಲೇ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 13-09-1967 ರ ಎಮ್.ಇ ನಂ. 1015 ರ ಪ್ರಕಾರ ದಾವಾ ಸ್ವತ್ತು ಸಂಖ್ಯೆ 5 ರಿಂದ 9 ಇವುಗಳಲ್ಲಿ ನನ್ನ ತಂದೆಯ ಸಹೋದರರ ಮಧ್ಯೆ ಮತ್ತು ಅಜ್ಜಿಯ ಮಧ್ಯೆ ಪಾಲು ವಿಭಜನೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಜನೆ ಪ್ರಕಾರ ಬ್ಲಾಕ್ ನಂ. 13 ರಲ್ಲಿ 2 ಎಕರೆ 3 ಗುಂಟೆ ಮೃತ ಅರ್ಜುನ ಇವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ.

ನಮ್ಮ ಅಜ್ಜಿ ಬಾಳವ್ವ ಇವರ ಪಾಲಿಗೆ ಬ್ಲಾಕ್ ನಂ. 163 ರಲ್ಲಿ 1 ಎಕರೆ 8 ಗುಂಟ ಬಂದಿರುತ್ತದೆ ಎಂದರೆ ಸರಿ. ಮೃತ ಪರಶುರಾಮ ಇವರಿಗೆ ಬ್ಲಾಕ್ ನಂ. 166 ರಲ್ಲಿ 1 ಎಕರೆ 35 ಗುಂಟ ಮತ್ತು ಗಾವಟಾಣದಲ್ಲಿ 1 ಗುಂಟ 9 ¾ ಅಂಶ ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಜನೆಯಲ್ಲಿ ನಮ್ಮ ತಂದೆಗೆ ಬ್ಲಾಕ್ ನಂ. 268 ರಲ್ಲಿ 1 ಎಕರೆ 2 ಗುಂಟ ಮತ್ತು ಬ್ಲಾಕ್ ನಂ. 270 ರಲ್ಲಿ 38 ಗುಂಟ ಬಂದಿರುತ್ತದೆ ಎಂದರೆ ಸರಿ. ಮೇಲೆ ಹೇಳಿದ ಪ್ರಕಾರ ಪಾಲು ಆದ ನಂತರ ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ನಾವು ಸಾಗುವಳಿ ಮಾಡಿಕೊಂಡು ಬಂದಿರುತ್ತೆವೆ ಎಂದರೆ ಸರಿ. ಸದರಿ ಪಾಲು ವಿಭಜನೆ ಪ್ರಕಾರ ದಾಖಲೆಗಳಲ್ಲಿ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿ . ಸದರಿ ಪಾಲು ವಿಭಜನೆಯುಲ್ಲಿ ಯಾರ ಯಾರ ಹೆಸರಿಗೆ ಜಮೀನುಗಳು ಬಂದಿದ್ದವೋ ಅವರು ತೀರಿಕೊಂಡ ನಂತರ ಅವರ ವಾರಸುದಾರರ ಹೆಸರಿಗೆ ಸದರಿ ಆಸ್ತಿಗಳು ಹಕ್ಕು ಬದಲಾವಣೆ ಆಗಿರುತ್ತವೆ ಎಂದರೆ ಸರಿ. ನಮ್ಮ ಅಜ್ಜಿ ಬಾಳವ್ವ ತೀರಿಕೊಂಡ ನಂತರ ಅವರ ಪಾಲಿಗೆ ಬಂದ ಬ್ಲಾಕ್ ನಂ. 160 ನಮ್ಮ ತಂದೆ ಮತ್ತು ಅವರ ಸಹೋದರರ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಅಜ್ಜನ ಹೆಸರಿಗೆ ಬೇರೆ ಯವುದೇ ಆಸ್ತಿಗಳು ಇದ್ದಿರಲಿಲ್ಲ ಎಂದರೆ ಸರಿಯಲ್ಲ . ಮೇಲೆ ಹೇಳಿದಂತೆ ಪಾಲು ವಿಭಜನೆ ಆದ ನಂತರ ನಾನು ಸ್ವಂತವಾಗಿ ಯಾವುದೇ ಆಸ್ತಿಗಳನ್ನು ಖರೀದಿ ಮಾಡಿರುವುದಿಲ್ಲ. 1967 ರಲ್ಲಿ ಎಮ್.ಇ ನಂ. 1015 ದಾಖಲಾದ ನಂತರ ಇಲ್ಲಿಯವರೆಗೂ ಸದರಿ ಎಂಟ್ರಿಗಳನ್ನು ನೀವು ಪ್ರಶ್ನಿಸಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಈ ಹಿಂದೆ ಮಾಡಿರುವುದಿಲ್ಲ ಇದೇ ನ್ಯಾಯಲಯದಲ್ಲಿ ಇದೇ ದಾವೆಯಲ್ಲಿ ಪ್ರಶ್ನೀಸಿರುತ್ತೇವೆ ಎಂದು ನುಡಿಯುತ್ತಾರೆ . ಪ್ರತಿವಾದಿಗಳು ತಮ್ಮ ಸ್ವಂತ ದುಡಿಮೆಯಿಂದ ಗಳಿಸಿದ ಆಸ್ತಿಗಳನ್ನು ಪ್ರಸ್ತುತ ದಾವೆಯಲ್ಲಿ ದಾವಾ ಆಸ್ತಿಗಳನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಮೃತ ಪರಶುರಾಮ ಇವರ ಪಾಲಿಗೆ ಬಂದ ಆಸ್ತಿಗಳನ್ನು ಅವರ ಮಕ್ಕಳು ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಡೊಂಗರಿಕೊಪ್ಪ ಗ್ರಾಮದ ಎಮ್.ಇ. ನಂ. 142 ರ ಪ್ರಕಾರ ದಾವಾ ಸ್ವತ್ತು ಸಂಖ್ಯೆ 1 ರಿಂದ 4 ಇವುಗಳನ್ನು ಮೃತ ಪರಶುರಾಮ ಯಲ್ಲಪ್ಪ ಕೊರವೇಕರ ಇವರು ಖರೀದಿ ಮಾಡಿರುತ್ತಾರೆ ಎಂದೆರ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ವಟ್ಟಿಗೆ ಇದ್ದಾಗ ಖರೀದಿ ಮಾಡಿದ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಎಮ್.ಇ ಆದ ನಂತರ ಹಿಡುವಳಿ ಪ್ರಕಾರ ಬ್ಲಾಕ್ ನಂ. 24 ರಿಂದ 28 ಇವುಗಳನ್ನು ಒಟ್ಟುಗೂಡಿಸಿ ಬ್ಲಾಕ್ ನಂ. 31 ಮತ್ತು 32 ಆಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ 3 ಭಾಗಗಳನ್ನು ಮಾಡಿ ಎಂಟ್ರಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಎಂಟ್ರೀ ಪ್ರಕಾರ ಬಂದ 1/3 ಅಂಶ ಭಾಗದಲ್ಲಿ ನನ್ನ ತಂದೆ ತೀರಿಕೊಂಡ ನಂತರ ಸದರಿ ಆಸ್ತಿಗಳಿಗೆ ನಮ್ಮ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಬ್ಲಾಕ್ ನಂ. 31 ರಲ್ಲಿ 1 ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಅವರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ . ಬ್ಲಾಕ್ ನಂ. 31 ರಲ್ಲಿ 3 ನೇ ಪ್ರತಿವಾದಿ ಪಾಲಿಗೆ ಬಂದ ಆಸ್ತಿಯಲ್ಲಿ 1 ಎಕರೆ ಜಮೀನನ್ನು 4 ನೇ ಪ್ರತಿವಾದಿ ಖರೀದಿ ಮಾಡಿದ್ದು ಅದಕ್ಕೆ ಬ್ಲಾಕ್ ನಂ. 31/1 ಎಂದು ಸಂಖ್ಯೇ ನೀಡಲಾಗಿರುತ್ತದೆ ಎಂದೆರ ಸರಿ. ನಾನು ಪ್ರತಿವಾದಿ ಸಂಖ್ಯೆ 3 ರವರಿಂದ ಬ್ಲಾಕ್ ನಂ. 31 ರಲ್ಲಿ 39 ಗುಂಟ ಜಾಗವನ್ನು ಖರೀದಿ ಮಾಡಿರುತ್ತೆನೆ ಎಂದರೆ ಸರಿ. ನಾನು ಖರೀದಿ ಮಾಡಿದ ಸದರಿ ಜಾಗಕ್ಕೆ ಬ್ಲಾಕ್ ನಂ. 31/3 ಎಂದು ಸಂಖ್ಯೆ ನೀಡಲಾಗಿರುತ್ತದೆ ಎಂದರೆ ಸರಿ.

ಈ ಮೇಲಿನಂತೆ ಈಗಾಗಲೇ ಪಾಲು ವಿಭಜನೆ ಆಗಿದ್ದರಿಂದ ಮತ್ತು ಸದರಿ ಪಾಲು ವಿಭಜನೆಯನ್ನು ನಾನು ಈ ವರೆಗೆ ಪ್ರಶ್ನಿಸದೆ ಇರುವುದರಿಂದ ನನಗೆ ಪಾಲು ವಿಭಜನೆ ಕೋರಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಮ್ಯುಟೇಶನ್ ಎಂಟ್ರಿಗಳನ್ನು ನ್ಯಾಯಲಯದ ಮುಂದೆ ಹಾಜರುಪಡಿಸಿದರೇ ನಿಜ ಸಂಗತಿ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಕೇವಲ ಫಹಣಿ ಪತ್ರಿಕೆಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 1967 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳಲ್ಲಿ ಪಾಲು ವಿಭಜನೆ ಆಗಿದ್ದು ಸದರಿ ಪಾಲು ವಿಭಜನೆ ಪ್ರಕಾರ ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದರಿಂದ ಈಗ ಪಾಲು ವಿಭಜನೆ ಕೇಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ . ದಾವೆ ಮಾಡುವ ಕಾಲಕ್ಕೆ ನಾನು ಏಕತ್ರ ಕುಟುಂಬದ ಸದಸ್ಯ ಇದ್ದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗಳ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರ್ಪಡೆ ಮಾಡಿ ಸುಳ್ಳು ದಾವೆ ಮಾಡಿರುತ್ತೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಏನು ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).**

ಓ.ಹೇ.ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ.